ಮೆ: ಇ. ಐ. ಡಿ. ಪ್ಯಾರಿ(ಇಂಡಿಯಾ) ಲಿಮಿಟೆಡ್, ಇವರು ಬಾಗಲಕೋಟ ಜಿಲ್ಲೆ, ಬಾಗಲಕೋಟ ತಾಲ್ಲೂಕು, ನಾಗರಾಳ ಹಾಗೂ ನೈನೇಗಲಿ ಗ್ರಾಮದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು 4750 ಟಿಸಿಡಿಯಿಂದ 7500 ಟಿಸಿಡಿಗೆ ಹೆಚ್ಚಿಸಲು, ಸಹವಿದ್ಯುತ್ ಉತ್ಪಾದನೆಯನ್ನು 15 ಮೆಗಾವ್ಯಾಟ್‌ನಿಂದ 34 ಮೆಗಾವ್ಯಾಟ್‌ಗೆ ಹೆಚ್ಚಿಸಲು ಹಾಗೂ ಹೊಸದಾಗಿ 60 ಕೆಎಲ್‌ಪಿಡಿ ಸಾಮರ್ಥ್ಯದ ಮದ್ಯಸಾರ ಘಟಕದ ಜೊತೆಗೆ ಭಸ್ಮೀಕರಣ ಬಾಯ್ಲರ್ ಉಪಯೋಗಿಸಿ 03 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಉದ್ದೇಶಿಸಿರುತ್ತಾರೆ. ಇವರ ಪ್ರಯುಕ್ತ ಕರೆಯಲಾದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು

ದಿನಾಂಕ : **29/08/2018**

ಸಮಯ : **11.00 ಗಂಟೆ ಬೆಳಿಗ್ಗೆ**

ಸ್ಥಳ : **ಯೋಜನೆಯ ಸ್ಥಳದಲ್ಲಿ**

- **ಮೆ: ಇ. ಐ. ಡಿ. ಪ್ಯಾರಿ(ಇಂಡಿಯಾ) ಲಿಮಿಟೆಡ್‌ರವರು ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.**
- **ಹಾಲಿ ಕಾರ್ಯನಿರ್ವಹಿಸುತ್ತಿರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು 4750 ಟಿಸಿಡಿಯಿಂದ 7500 ಟಿಸಿಡಿಗೆ ಹೆಚ್ಚಿಸುವುದು.**
- **ಸಹವಿದ್ಯುತ್ ಉತ್ಪಾದನೆಯನ್ನು 15 ಮೆಗಾವ್ಯಾಟ್‌ನಿಂದ 34 ಮೆಗಾವ್ಯಾಟ್‌ಗೆ ಹೆಚ್ಚಿಸುವುದು.**
- **ಹೊಸದಾಗಿ 60 ಕೆಎಲ್‌ಪಿಡಿ ಸಾಮರ್ಥ್ಯದ ಮದ್ಯಸಾರ ಘಟಕದ ಜೊತೆಗೆ ಭಸ್ಮೀಕರಣ ಬಾಯ್ಲರ್ ಉಪಯೋಗಿಸಿ 03 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು.**

**ಯೋಜನೆ ಸ್ಥಳದ ವಿವರಗಳು:-**

- ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಬಾಗಲಕೋಟ ಜಿಲ್ಲೆ, ಬಾಗಲಕೋಟ ತಾಲ್ಲೂಕು, ನಾಗರಾಳ ಹಾಗೂ ನೈನೇಗಲಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕದ ಆವರಣದಲ್ಲಿ ಕೈಗೊಳ್ಳಲಾಗುವುದು.

**-: ಸಭೆಗೆ ಹಾಜರಿದ್ದ ಅಧಿಕಾರಿಗಳು :-**

ಸದರ ಸಾರ್ವಜನಿಕ ವಿಚಾರಣಾ ಸಭೆಯನ್ನು ಪರಿಸರ ಸಂರಕ್ಷಣ ಹಾಗು ಅರಣ್ಯ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2006ರ ತಿದ್ದುಪಡಿ ದಿನಾಂಕವು 01-12-2009 ರ ಮೇರೆಗೆ ಜರುಗಿಸಲಾಯಿತು.

**-: ಸಾರ್ವಜನಿಕ ವಿಚಾರಣಾ ಮಂಡಳಿ :-**
**ಹಾಜರಿದ್ದ ಸಾರ್ವಜನಿಕ ವಿಚಾರ ಮಂಡಳಿ ಸದಸ್ಯರು**

| | | |
|---|---|---|
| 01. | **ಶ್ರೀ. ಕೆ. ಜಿ. ಶಾಂತಾರಾಮ**, ಭಾರತ ಆಡಳಿತ ಸೇವೆ, ಜಿಲ್ಲಾಧಿಕಾರಿಗಳು, ಬಾಗಲಕೋಟ ಜಿಲ್ಲೆ. | ಅಧ್ಯಕ್ಷರು |
| 02 | **ಶ್ರೀ. ವಿ. ಟಿ. ಕಡಕಭಾವಿ**, ಹಿರಿಯಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯಕಛೇರಿ, ಧಾರವಾಡ. | ಸದಸ್ಯರು |
| 03. | **ಶ್ರೀ ಎಮ್. ಎ. ಮನಿಯಾರ**, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬಾಗಲಕೋಟ. | ಸದಸ್ಯರು |

| ಮೆ: ಇ. ಐ. ಡಿ. ಪ್ಯಾರಿ(ಇಂಡಿಯಾ) ಲಿಮಿಟೆಡ್, ಸಂಸ್ಥೆಯ ಪ್ರತಿನಿಧಿಗಳು (ಯೋಜನೆಯ ಪ್ರತಿಪಾದಕರು) | | |
|---|---|---|
| 1 | ಶ್ರೀ. ಟಿ. ಕನನ್ | ಕಾರ್ಯಾಚರಣೆ ಉಪಾಧ್ಯಾಕ್ಷರು |
| 2 | ಶ್ರೀ. ಎಸ್ ರತ್ನಾಚಲಂ | ಸಂಯೋಜಿತ ಉಪಾಧ್ಯಕ್ಷರು |
| 3 | ಶ್ರೀ. ಎಸ್. ಪ್ರಕಾಶ | ಸಂಯೋಜಿತ ಉಪಾಧ್ಯಕ್ಷರು |
| 4 | ಶ್ರೀ. ಕೆ. ಪಿ.ವಿ.ಎಸ್. ಮೂರ್ತಿ | ಉಪ ವ್ಯವಸ್ಥಾಪಕರು |
| 5 | ಶ್ರೀ. ಹನುಮಂತ ನೆಲಗೆ | ವ್ಯವಸ್ಥಾಪಕರು |
| 6 | ಶ್ರೀ. ದಿವ್ಯಾರಜ ಪಿಳ್ಳೈ | ಪ್ರಾದೇಶಿಕ ಎಚ್. ಆರ್. ಮುಖ್ಯಸ್ಥ |
| 7 | ಶ್ರೀ. ಶಾಜಿ ಥಾಮಸ್ | ಸಹಕಾರಿ ಸಂಬಂಧ ವ್ಯವಸ್ಥಾಪಕರು |
| 8 | ಶ್ರೀ. ಬಿ. ಶ್ರವಣ | ಪರಿಸರ ತಜ್ಞರು |

ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯದ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯ ದಿನಾಂಕ:14-09-2006 (ತಿದ್ದುಪಡಿ ಅಧಿಸೂಚನೆ ದಿನಾಂಕ : 01-12-2009) ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮುಂಚೆ ಸಾರ್ವಜನಿಕ ಆಲಿಕೆಯನ್ನು ನಿರ್ಧರಿಸಿದ ಯೋಜನೆಯ ಸ್ಥಳದಲ್ಲಿ ಜರುಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದನ್ನು ಮಾನ್ಯ ಜಿಲ್ಲಾಧಿಕಾರಿಗಳು ಅಥವಾ ಇತರೆ ಹೆಚ್ಚುವರಿ ಜಿಲ್ಲಾಧಿಕಾರಿಗಳವರ ಹುದ್ದೆಗಿಂತ ಕೆಳಗಿರದಂತಹ ಅಧಿಕಾರಿಗಳ ಸಭಾಧ್ಯಕ್ಷತೆಯಲ್ಲಿ ಜರುಗತಕ್ಕದು.

ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ, ಇವರ Terms of Reference ಪತ್ರದ ಸಂಖ್ಯೆ: J-11011/358/2016-IA-II(I), ದಿನಾಂಕ: 28-02-2017ರಂತೆ ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟ ಜಿಲ್ಲೆ, ಬಾಗಲಕೋಟರವರು ದಿನಾಂಕ: 17-07-2018ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ದಿನಾಂಕ:- 29/08/2018ರಂದು ಮಾನ್ಯ ಜಿಲ್ಲಾಧಿಕಾರಿಗಳು ಬಾಗಲಕೋಟ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕಾ ವಿಚಾರಣಾ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಆಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ:01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪ್ರಚಲಿತ ದಿನ ಪತ್ರಿಕೆಯಾದ **"ಪ್ರಜಾ ವಾಣಿ"** ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಲಿತ ದಿನ ಪತ್ರಿಕೆಯಾದ **"Deccan Herald"** ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ:- 29/07/2018ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ **"ಸಂಜೆ ದರ್ಶನ"**ದಲ್ಲಿ ದಿನಾಂಕ:- 31/07/2018 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿ ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಸಾರ್ವಜನಿಕ ವಿಚಾರಣಾ ಸಮಿತಿ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಾಮರ್ಶನೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಛೇರಿ, ಬಾಗಲಕೋಟ, ಜಿಲ್ಲೆ: ಬಾಗಲಕೋಟ.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ, ಬಾಗಲಕೋಟ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟ.
- ನಗರಸಭೆ, ಬಾಗಲಕೋಟ, ಬಾಗಲಕೋಟ ಜಿಲ್ಲೆ.
- ಗ್ರಾಮ ಪಂಚಾಯತ ಕಾರ್ಯಾಲಯ, ನಾಗರಾಳ ಹಾಗೂ ನೈನೇಗಲಿ ಗ್ರಾಮ.
- ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಾಗಲಕೋಟ.

**ಶ್ರೀ ವಿ. ಟಿ. ಕಡಕಭಾವಿ, ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ., ವಲಯ ಕಛೇರಿ, ಧಾರವಾಡ:**

- ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯಲ್ಲಿ ಉದ್ದಿಮೆದಾರರು ಮಂಡಿಸಿದ ಪವರ ಪಾಯಿಂಟ ಪ್ರಸೆಂಟೇಶನ್‌ದಲ್ಲಿ ವಿಸ್ತರಣೆಯ ಯೋಜನೆಯ ಬಗ್ಗೆ ಹಾಗೂ ಅದರಿಂದ ಪರಿಸರದ ಮೇಲಾಗುವ ಆಘಾತ ಮತ್ತು ಅದನ್ನು ತಡೆಗಟ್ಟುವ ಕ್ರಮಗಳ ಮೇಲೆ ಹೆಚ್ಚಿನ ಮಾಹಿತಿ ಇಲ್ಲದಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತ ಪಡಿಸಿದರು.

- ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರದವರು ನೀಡಿದ ಟರ್ಮ ಆಫ್ ರೆಫೆರೆನ್ಸಕ್ಕೆ(Terms of Reference) ಅನುಗುಣವಾಗಿ ಪರಿಸರ ಆಘಾತ ಅಧ್ಯಯನದ ವರದಿಯನ್ನು ತಯಾರಿಸಬೇಕು. ಆದರೆ ಈ ವರದಿಯಲ್ಲಿ ಕಲವು ನ್ಯೂನತೆಗಳು ಇದ್ದು ಅವುಗಳನ್ನು ಸರಿಪಡಿಸಲು ನಿರ್ದೇಶಿಸಿದರು.

- ಪರಿಸರ ತಜ್ಞರು ಕರಡು ಪರಿಸರ ಆಘಾತ ಮೌಲ್ಯಮಾಪನವನ್ನು ವಾತಾವರಣದ ವಿಷಮ ಪರಿಸ್ಥಿತಿಯಲ್ಲಿ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಅಭ್ಯಸಿಸಬೇಕೆಂದು ಸಲಹೆ ನೀಡಿದರು.

**ಸಾರ್ವಜನಿಕ ವಿಚಾರಣೆಯ ಕಾಲಕ್ಕೆ 11 ಜನರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು ಮತ್ತು ಕಾರ್ಖಾನೆಯವರು ಅದಕ್ಕೆ ತಕ್ಕಂತೆ ಸ್ಪಷ್ಟನೆ ನೀಡಿದ್ದು. ಅದರ ವಿವಿರಗಳು ಈ ಕೆಳಗಿನಂತಿವೆ.**

### 1. ಬಸವರಾಜ ಕುಂಬಾರ, ಕೃಷ್ಣ ಕಬ್ಬು ಬೆಳೆಗಾರರ ಸಹಕಾರಿ ಸಂಘದ ಅಧ್ಯಕ್ಷ

- ಸದರಿ ಕಾರ್ಖಾನೆಯು ಗ್ರಾಮೀಣ ಭಾಗದಲ್ಲಿ ಸ್ಥಾಪಿತಗೊಂಡಿದ್ದರಿಂದ ಸುತ್ತಮುತ್ತಲಿನ ಜನರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತುಂಬಾ ಅನುಕೂಲಗಳಾಗಿವೆಯೆಂದು ತಿಳಿಸಿದರು.

- ಸಾರ್ವಜನಿಕರು ಕಾರ್ಖಾನೆಯವರು ಉದ್ದೇಶಿಸಿರುವ ವಿಸ್ತರಣೆಯಿಂದ ಆಗುವ ಪರಿಸರ ಮಾಲಿನ್ಯದ ಬಗ್ಗೆ ಹೇಳಲು ಸಾಧ್ಯವಿಲ್ಲ ಅದನ್ನು ಸಂಬಂಧಿಸಿದ ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿಸಬೇಕೆಂದು ವಿನಂತಿಸಿದರು.

- ಸದರಿ ವಿಸ್ತರಣೆಯಿಂದ ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಬೀರದಂತೆ ಕಾರ್ಖಾನೆಯವರು ಕಟ್ಟು ನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ವಿನಂತಿಸಿಕೊಂಡರು.

- ಸದರಿ ವಿಸ್ತರಣೆ ಯೋಜನೆಗೆ ಎಷ್ಟು ಪ್ರಮಾಣದ ನೀರನ್ನು ಬಳಸಲಾಗುತ್ತದೆ ಹಾಗೂ ಹೆಚ್ಚುವರಿ ತ್ಯಾಜ್ಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳಿಗೆ ಸಂಸ್ಕರಿಸಿ ರೈತರಿಗೆ ಪೂರೈಸುವ ಕುರಿತು ಈ ಸಭೆಯಲ್ಲಿ ವಿವರಣೆ ನೀಡಲು ಕೋರಿದರು.

- ಸದರಿ ಕಾರ್ಖಾನೆಯವರು ಸುತ್ತಮುತ್ತಲಿನ ಜನರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ನೀಡಿದ್ದಾರೆ ಹಾಗೂ ಸದರಿ ಕಾರ್ಖಾನೆಯಿಂದ ಸಾರ್ವಜನಿಕರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅನುಕೂಲಗಳಾಗಿವೆಯೆಂದು ತಿಳಿಸಿದರು.

- ಸದರಿ ವಿಸ್ತರಣೆಯಿಂದ ಪರಿಸರದ ಮೇಲೆ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮಗಳು ಬೀರದಂತೆ ಕೂಲಂಕುಷವಾಗಿ ಪರಿಶೀಲಿಸಿದ ನಂತರವೇ ಸದರಿ ಯೋಜನೆಗೆ ಸಮ್ಮತಿಯನ್ನು ನೀಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಆಗ್ರಹಿಸಿದರು.

- ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಕ.ರಾ.ಮಾ.ನಿ.ಮಂಡಳಿ, ಧಾರವಾಡ.
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ,ದಕ್ಷಿಣ ವಲಯ ಕಛೇರಿ ನಂ ಇ-3/240,ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ, 17 ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಳ, ಬೆಂಗಳೂರು.
- ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ ಚರ್ಚ್‌ಸ್ಟ್ರೀಟ್, ಬೆಂಗಳೂರು.

ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು, ಬಾಗಲಕೋಟ, ಇವರು ಸಾರ್ವಜನಿಕ ಆಲಿಕೆ ಪಟ್ಟಿ, ಜಾಹೀರಾತುಗಳಲ್ಲಿ ನೀಡಿದ ಎಲ್ಲ ಅಧಿಸೂಚನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಇವುಗಳಿಂದ ಸಮರ್ಪಕ ಪ್ರಕಟಣೆಯಾಗಿದೆಯೋ ಹೇಗೆ ಎಂಬುದನ್ನು ಅವಲೋಕಿಸಿದರು ಹಾಗೂ ಇದು ಕಾನೂನಿನ ಅಧಿನಿಯಮಾನುಸಾರವಾಗಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಿದರು.

ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಾಗಲಕೋಟ ಇವರಲ್ಲಿ ದಿನಾಂಕ:- 28-08-2018 ರವರೆಗೆ ಎರಡು ಈ-ಮೇಲ್ ಮೂಲಕ ಅರ್ಜಿಯು ಸ್ವೀಕೃತವಾಗಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿವೆ.

1. **ಶ್ರೀ. ಬಿ ವಿ ರೆಡ್ಡಿ, ಜ್ಞಾನ ಜ್ಯೋತಿ ರುರಲ್ ಡೆವೆಲಪಮೆಂಟ ಸೊಸೈಟಿ,** ಇವರಿಂದ ದಿನಾಂಕ: 28/08/2018, ಇದರ ಪ್ರತಿಯನ್ನು **ಅನುಬಂಧ-1ರ** ಮೂಲಕ ಲಗತ್ತಿಸಲಾಗಿದೆ.
2. **ಶ್ರೀ. ರವಿಕುಮಾರ ನಂದಿಪತಿ, ಎನ್ವಿರಾಮೆಂಟಲ್ ವಾಲಂಟಿಯರ್ ಮತ್ತು ಹಿರಿಯ ಸಂಪಾದಕರು, ಹೈದರಾಬಾದ್,** ಇವರಿಂದ ದಿನಾಂಕ: 28/08/2018, ಇದರ ಪ್ರತಿಯನ್ನು **ಅನುಬಂಧ-2ರ** ಮೂಲಕ ಲಗತ್ತಿಸಲಾಗಿದೆ.

ದಿನಾಂಕ:- 29/08/2018ರಂದು ಜರುಗಿಸಿದ ಸಾರ್ವಜನಿಕ ವಿಚರಣಾ ಸಭೆಗೆ ಆಗಮಿಸಿದ ಜಿಲ್ಲಾಧಿಕಾರಿಗಳು, ಬಾಗಲಕೋಟ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ **ಶ್ರೀ. ಎಮ್. ಎ. ಮನಿಯಾರ, ಪರಿಸರ ಅಧಿಕಾರಿಗಳು** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಾರ್ಯಾಲಯ, ಬಾಗಲಕೋಟ ಇವರು ಆತ್ಮೀಯವಾಗಿ ಸ್ವಾಗತಿಸಿದರು. ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ವಿಚಾರಣೆಯ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಜಿಲ್ಲಾದಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೋರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೋರಿದರು. ಸಭೆಯ ನಡುವಳಿಗಳನ್ನು ಚಿತ್ರೀಕರಣ ಮಾಡಲಾಗುವುದು ಎಂದು ವಿವರಿಸಿದರು.

ಮೇ!! **M/s. Pioneer Enviro, Laboratories & Consultants Pvt Ltd.,** ಸಂಸ್ಥೆಯ **ಪರಿಸರ ತಜ್ಞ ಶ್ರೀ. ಬಿ. ಶ್ರವಣ,** ಇವರು ಕನ್ನಡದಲ್ಲಿ ನಿಯೋಜಿತ ಯೋಜನೆಯ ಉದ್ದೇಶಗಳ ಬಗ್ಗೆ ಚುಕ್ಕಿ ಬಿಂದು ಪ್ರದರ್ಶನದ ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು. **ಇವುಗಳ ಹಾರ್ಡಕಾಪಿಯನ್ನು ಅನುಬಂಧ - 3ರ ಮೂಲಕ ಲಗತ್ತಿಸಲಾಗಿದೆ.**

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸುತ್ತಮುತ್ತಲಿನ ಗ್ರಾಮಸ್ಥರು, ಸರ್ಕಾರ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರ-ಕರ್ತರು, ಹಾಗೂ ಆಸಕ್ತಿ ಹೊಂದಿದ ಇತರರು ಸದರಿ ಸಭೆಯಲ್ಲಿ ಭಾಗ ವಹಿಸಿದ್ದರು. **ಸಭೆಯಲ್ಲಿ ಭಾಗವಹಿಸಿದವರ ಯಾದಿಯನ್ನು ಅನುಬಂಧ-4ರ ಮೂಲಕ ಲಗತ್ತಿಸಲಾಗಿದೆ.** ಜಿಲ್ಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿಯೂ ನೀಡಬಹುದೆಂದು ಸೂಚಿಸಿದರು.

## 2. ಶ್ರೀ ಬಸವಂತಪ್ಪ ಮೇಟಿ, ತಿಮ್ಮಾಪೂರ

- ಸದರಿ ಕಾರ್ಖಾನೆಯು ಕಳೆದ 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ, ಸದರಿ ಕಾರ್ಖಾನೆಯಿಂದ ಸುತ್ತಮುತ್ತಲಿನ ರೈತರಿಗೆ ಆರ್ಥಿಕವಾಗಿ ತುಂಬಾ ಅನುಕೂಲವಾಗಿದೆ. ಆದರೆ ಆರ್ಥಿಕ ಸ್ಥಿತಿಯ ಜೊತೆಗೆ ಜನರ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಸಹ ತುಂಬಾ ಮುಖ್ಯವಾಗಿರುತ್ತದೆ ಎಂದು ತಿಳಿಸಿದರು.

- ಇಲ್ಲಿಯವರೆಗೆ ಸದರಿ ಕಾರ್ಖಾನೆಯಿಂದ ಯಾವುದೇ ರೀತಿಯಲ್ಲಿ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವುದಿಲ್ಲ ಮತ್ತು ಮುಂದೆ ಕೂಡ ಸುತ್ತಮುತ್ತಲಿನ ಜನರ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಬೀರದಂತೆ ಕಾರ್ಖಾನೆಯವರು ಹೆಚ್ಚಿನ ಕಾಳಜಿವಹಿಸಬೇಕೆಂದು ಹಾಗೂ ಕಾರ್ಖಾನೆಯವರು ಆರೋಗ್ಯ ಸಮೀಕ್ಷೆಯನ್ನು ನಡೆಸಬೇಕೆಂದು ವಿನಂತಿಸಿಕೊಂಡರು.

- ಸದರಿ ಕಾರ್ಖಾನೆಯ ಚಿಮಣಿಯಿಂದ ಧೂಳು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬೀಳುತ್ತಿದೆ, ಅದನ್ನು ನಿಯಂತ್ರಿಸಲು ಕಾರ್ಖಾನೆಯವರು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

- ಮದ್ಯಸಾರ ಘಟಕದ ಸ್ಥಾಪನೆಯಿಂದ ದುರ್ವಾಸನೆ ಉಂಟಾಗಬಹುದು ಮತ್ತು ಮಾಲಿನ್ಯ ಕೂಡ ಆಗಬಹುದು, ಅದನ್ನು ತಡೆಗಟ್ಟಲು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಬೇಕೆಂದು ಕೇಳಿಕೊಂಡರು.

- ರೈತರ ಆರೋಗ್ಯದ ಮೇಲೆ ಮತ್ತು ಅವರ ಕೃಷಿ ಭೂಮಿಯ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ನಿಯಂತ್ರಣ ಮಾಡಬೇಕೆಂದು ರೈತರ ಪರವಾಗಿ ವಿನಂತಿಸಿಕೊಂಡರು.

- ಹಸಿರೀಕರಣವನ್ನು ಕೇವಲ ಕಾರ್ಖಾನೆಯ ಆವರಣಕ್ಕೆ ಸೀಮಿತವಾಗದೆ, ಕಾರ್ಖಾನೆಯವರು ಕೃಷಿಕರಿಗೆ ಉಚಿತವಾಗಿ ಸಸಿಗಳನ್ನು ನೀಡುವ ಮೂಲಕ ಹಸಿರೀಕರಣವನ್ನು ರೈತರ ಕೃಷಿ ಜಮೀನುಗಳಿಗೆ ಸಹ ವಿಸ್ತರಿಸಲು ಕೋರಿಕೊಂಡರು.

## 3. ಶ್ರೀ ಬಿ ಎನ್ ಕೊಣ್ಣೂರ, ತಾಲೂಕು ಪಂಚಾಯತ, ಬಾಗಲಕೋಟ ಮಾಜಿ ಅಧ್ಯಕ್ಷರು

- ಈ ಒಣಬೇಸಾಯದ ನಾಡಿನಲ್ಲಿ ಸದರಿ ಕಾರ್ಖಾನೆ ಪ್ರಾರಂಭವಾಗಿದ್ದರಿಂದ ಎಲ್ಲ ಸುತ್ತಮುತ್ತಲಿನ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಹಾಗೂ ಎಲ್ಲ ರೈತರು ಕಾರ್ಖಾನೆಯವರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ ಎಂದು ತಿಳಿಸಿದರು.

- ಸದರಿ ಕಾರ್ಖಾನೆಯ ವಿಸ್ತರಣೆಯಿಂದ ಮಾಲಿನ್ಯವಾಗುವುದು ಖಚಿತ. ಆದ್ದರಿಂದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಅಳವಡಿಸಿ ಮಾಲಿನ್ಯವಾಗದಂತಹ ಕ್ರಮಗಳನ್ನು ಕೈಗೊಂಡ ನಂತರವೇ ಸದರಿ ವಿಸ್ತರಣೆಗೆ ಸಮ್ಮತಿ ಸೂಚಿಸಬೇಕೆಂದು ವಿನಂತಿಸಿದರು.

- ಸದರಿ ವಿಸ್ತರಣೆಯಿಂದ ರೈತರ ಭೂಮಿಗೆ ಯಾವುದೇ ರೀತಿಯ ಹಾನಿಯಾಗದಂತೆ ಕಾಳಜಿವಹಿಸುವಂತೆ ವಿನಂತಿಸಿಕೊಂಡರು.

## 4. ಶ್ರೀ ಎಸ್ ಕೆ ಉಪ್ಪಾರ, ಹೊಸುರ

- ಕಾರ್ಖಾನೆಗಳಿಂದ ಹೊರಹೊಮ್ಮುವ ರಾಸಾಯನಿಕ ತ್ಯಾಜ್ಯಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ರೈತರಿಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿದರು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಕೇಳಿಕೊಂಡರು.

- ರಾಜ್ಯ ಮಾಲಿನ್ಯ ನಿಯಂತ್ರಣ ಮಾಂಡಳಿಯವರು ಮಾಲಿನ್ಯದ ಬಗ್ಗೆ ಸರ್ಕಾರ ಸೂಚಿಸಿರುವ ಮಾನದಂಡಗಳ ಬಗ್ಗೆ ನಮಗೆ ತಿಳಿಸುವಂತೆ ವಿನಂತಿಸಿಕೊಂಡರು.

- ಸದರಿ ಮಾನದಂಡಗಳ ಬಗ್ಗೆ ತಿಳಿದ ನಂತರವೇ ತಾವು ಪರಿಸರದ ಮೇಲಾಗುವ ಮಾಲಿನ್ಯದ ಬಗ್ಗೆ ಟಿಪ್ಪಣಿಗಳನ್ನು ಮಾಡಬಹುದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

- ಇಲ್ಲಿಯವರೆಗೆ ಸದರಿ ಕಾರ್ಖಾನೆಯಿಂದ ಯಾವುದೇ ರೀತಿಯ ಮಾಲಿನ್ಯವಾಗಿರುವುದಿಲ್ಲ ಮತ್ತು ಡಿಸ್ಟಿಲ್ಲರಿ ಘಟಕ ಸ್ಥಾಪನೆಯಿಂದ ಮಾಲಿನ್ಯವಾಗುವ ಅವಕ್ಶಾಶಗಳು ಹೆಚ್ಚು ಇರುತ್ತದೆ. ಆದ್ದರಿಂದ ಆಧುನಿಕ ತಂತ್ರಜ್ಞಾನ ಮ ಯಂತ್ರೋಪಕರಣಗಳನ್ನು ಅಳವಡಿಸಿ ಮಾಲಿನ್ಯವಾಗದಂತಹ ಕ್ರಮಗಳನ್ನು ಕೈಗೊಂಡ ನಂತರವೇ ಸದರಿ ವಿಸ್ತರಣೆಗೆ ಸಮ್ಮತಿ ಸೂಚಿಸಬೇಕೆಂದು ವಿನಂತಿಸಿದರು.

## 5. ಶ್ರೀ ಬಸಪ್ಪ ರು ಕುರಿ, ದೇವಲಾಪುರ

- ಸದರಿ ಕಾರ್ಖಾನೆಯು 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು ಅದರಿಂದ ಸುತ್ತಮುತ್ತಲಿನ ರೈತರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಿದ್ದಾರೆಂದು ತಿಳಿಸಿದರು.

- ಹೊಸ ಯೋಜನೆಗಳನ್ನು ಪ್ರಾರಂಭಿಸುವಾಗ ಅದರಿಂದ ಸಾಧಕ-ಬಾಧಕಗಳು ಉಂಟಾಗುವುದು ಸಹಜ, ಆದರೆ ಅದನ್ನು ಕಂಡುಹಿಡಿಯುವಷ್ಟು ರೈತರು ಇನ್ನೂ ಪ್ರಬುದ್ಧ ಆಗಿರುವುದಿಲ್ಲವೆಂದು ತಿಳಿಸಿದರು.

- ಇಲ್ಲಿಯವರೆಗೆ ಸದರಿ ಕಾರ್ಖಾನೆಯಿಂದ ಯಾವುದೇ ರೀತಿಯ ಮಾಲಿನ್ಯವಾಗಿರುವುದಿಲ್ಲ, ಇನ್ನು ಮುಂದೆಯೂ ಸಹ ಕಾರ್ಖಾನೆಯವರು ರೈತರ ಮೇಲೆ ದುಷ್ಪರಿಣಾಮವಾಗದ ರೀತಿಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂ ಅಗ್ರಹಿಸಿದರು.

## 6. ಶ್ರೀ ಸಿದ್ದಪ್ಪ ಮ ಕತ್ತಿ, ಹಿರೇಮಗೇರಿ

- ಸದರಿ ಕಾರ್ಖಾನೆಯವರು ತನ್ನ ಕಬ್ಬು ನುರಿಸುವ ಸಾಮರ್ಥ್ಯ, ಸಹ ವಿದ್ಯುತ್ ಉತ್ಪಾದನೆ ಹೆಚ್ಚಿಸುತ್ತಿರುವ ಬಗ್ಗೆ ಮತ್ತು ಡಿಸ್ಟಿಲ್ಲರಿ ಪ್ರಾರಂಭಿಸುತ್ತಿರುವುದು ಒಂದು ಸಂತೋಷದ ವಿಷಯವೆಂದು ತಿಳಿಸಿದರು.

- ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಕಬ್ಬಿನ ಬೆಳೆಯನ್ನು ಸಕಾಲದಲ್ಲಿ ಕಟಾವು ಮಾಡಬಹುದು ಮತ್ತು ರೈತರಿಗೆ ಎರಡನೇ ಬೆಳೆ ಬೆಳೆಯಲು ಅನುಕೂಲವಾಗುತ್ತದೆ ಹಾಗೂ ಜಮೀನಿನ ಇಳುವರಿ ಹೆಚ್ಚಾಗುತ್ತದೆಯೆಂದು ತಿಳಿಸಿದರು.

## 7. ಶ್ರೀ ಎನ್ ಎಮ್ ಸಂದಿಗೌಡ, ಅಮರಾವತಿ.

- ❖ ಕಾರ್ಖಾನೆಯವರು ನೆಲ, ಜಲ ಮತ್ತು ರೈತರ ಆರೋಗ್ಯದ ಮೇಲೆ ಹಾನಿಯಾಗದಂತೆ ಈ ಯೋಜನೆಯನ್ನು ಕೈಗೊಂಡರೆ ರೈತರಿಗೂ ಮತ್ತು ಸುತ್ತಮುತ್ತಲಿನ ಜನರಿಗೂ ಅನುಕೂಲವಾಗುತ್ತದೆ ಎಂದು ತಿಳಿಸಿದರು.

- ❖ ಸದರಿ ಯೋಜನೆಯಿಂದ ಯಾವುದೇ ರೀತಿಯ ಹಾನಿ ಮತ್ತು ದುಷ್ಪರಿಣಾಮವಾಗದಂತೆ ಕಾರ್ಖಾನೆಯವರು ಕ್ರಮವಹಿಸಬೇಕೆಂದು ವಿನಂತಿಸಿಕೊಂಡರು.

## 8. ಶ್ರೀ ನಿತ್ಯಾನಂದ, ಜಿರಲಭಾವಿ

- ❖ ಸದರಿ ಕಾರ್ಖಾನೆಯಿಂದ ಸುತ್ತಮುತ್ತಲಿನ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆಯೆಂದು ತಿಳಿಸಿದರು.

- ❖ ಸದರಿ ವಿಸ್ತರಣೆಯಿಂದ ಸುತ್ತಮುತ್ತಲಿನ ರೈತರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯಲು ಪ್ರೋತ್ಸಾಹ ಸಿಗುತ್ತದೆಯೆಂದು ತಿಳಿಸಿದರು.

- ❖ ಸಂಬಂಧಿಸಿದ ಅಧಿಕಾರಿಗಳು ಎಲ್ಲವನ್ನೂ ಕೂಲಂಕುಷವಾಗಿ ಪರೀಶಿಲಿಸಿದ ನಂತರವೇ ಸದರಿ ಯೋಜನೆಗೆ ಸಮ್ಮತಿ ನೀಡಬೇಕೆಂದು ವಿನಂತಿಸಿದರು.

## 9. ಶ್ರೀ ವಿಜಯಾನಂದ ಹೊಸಗೌಡರ, ಚಿಕ್ಕಮಾಗಿ.

- ❖ ಸದರಿ ಯೋಜನೆಯಿಂದ ಸುತ್ತಮುತ್ತಲಿನ ರೈತರಿಗೆ ತುಂಬಾ ಅನುಕೂಲಗಳು ಮತ್ತು ಅನಾನುಕೂಲಗಳು ಉಂಟಾಗಬಹುದು ಎಂದು ತಿಳಿಸಿದರು.

- ❖ ಯೋಜನೆ ಪ್ರಾರಂಭಿಸುವ ಮೊದಲೇ ಎಲ್ಲವನ್ನೂ ಕುಲಂಕೂಷವಾಗಿ ಪರಿಶೀಲಿಸಬೇಕು, ಏಕೆಂದರೆ ಅನುವತಿ ದೊರೆತ ನಂತರ ರೈತರು ಪ್ರತಿಭಟನೆ ಮಾಡಿ ಕಾರ್ಯಾಚರಣೆ ಸ್ಥಗಿತಗೊಳಿಸಲು ಆಗುವುದಿಲ್ಲವೆಂದು ಸಭೆಗೆ ತಿಳಿಸಿದರು.

- ❖ ಕಾರ್ಖಾನೆಯವರು ನೆಲ, ಜಲ ಮತ್ತು ರೈತರ ಆರೋಗ್ಯದ ಮೇಲೆ ಹಾನಿಯಾಗದಂತೆ ಈ ಯೋಜನೆಯನ್ನು ಕೈಗೊತ್ತಿಕೊಂಡರೆ ರೈತರಿಗೂ ಮತ್ತು ಸುತ್ತಮುತ್ತಲಿನ ಜನರಿಗೂ ತುಂಬಾ ಅನುಕೂಲವಾಗುತ್ತದೆಯೆಂದು ತಿಳಿಸಿದರು.

- ❖ ಸಂಬಂಧಿಸಿದ ಅಧಿಕಾರಿಗಳು ಎಲ್ಲವನ್ನೂ ಕೂಲಂಕುಷವಾಗಿ ಪರೀಶಿಲಿಸಿದ ನಂತರವೇ ಸದರಿ ಯೋಜನೆಗೆ ಸಮ್ಮತಿಯನ್ನು ನೀಡಬೇಕೆಂದು ವಿನಂತಿಸಿದರು.

## 10. ಶ್ರೀ ಬಸನಗೌಡ ಭೀ ನರಸನಗೌಡ್ರು, ಚಿಮ್ಮಲಗಿ

- ❖ ಕಾರ್ಖಾನೆಯವರು ವಿಸ್ತರಣೆಯ ಸಮಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಕೊಂಡರು ಸಹ ಪರಿಸರ ಮಾಲಿನ್ಯ ಉಂಟಾಗುತ್ತದೆಯೆಂದು ತಿಳಿಸಿದರು.

- ❖ ಕಾರ್ಖಾನೆಯವರು ಕಬ್ಬಿನ ಬೆಳೆಗೆ ಒಳ್ಳೆಯ ದರವನ್ನು ನೀಡುತ್ತಾರೆ, ಆದರೆ ಜನರ ಆರೋಗ್ಯದ ಮೇಲೆ ಸದರಿ ಯೋಜನೆಯಿಂದ ಪರಿಣಾಮ ಬೀರಿದರೆ ಆ ಹಣವನ್ನು ಪಡೆದುಕೊಂಡರೂ ಯಾವುದೇ ಪ್ರಯೋಜನ ಆಗುವುದಿಲ್ಲವೆಂದು ತಿಳಿಸಿದರು.

- ರಾಜ್ಯ ಮಾಲಿನ್ಯ ನಿಯಂತ್ರಣ ಮಾಂಡಳಿಯವರು ಮಾಲಿನ್ಯದ ಬಗ್ಗೆ ಸರ್ಕಾರ ಸೂಚಿಸಿರುವ ಮಾನದಂಡಗಳ ಬಗ್ಗೆ ನಮಗೆ ತಿಳಿಸುವಂತೆ ವಿನಂತಿಸಿಕೊಂಡರು.

- ಸದರಿ ಮಾನದಂಡಗಳ ಬಗ್ಗೆ ಮಾಹಿತಿ ನೀಡಿದ ನಂತರವೇ ತಾವು ಪರಿಸರದ ಮೇಲೆ ಉಂಟಾಗುವ ಮಾಲಿನ್ಯದ ಬಗ್ಗೆ ಟಪ್ಪಣೆಗಳನ್ನು ಮಾಡಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## 11. ಶ್ರೀ ಶಿವಾನಂದ ಗಂಗೂರ, ನಾಗರಾಳ ಗ್ರಾಮ

- ಸದರಿಯವರ ಜಮೀನು ಕಾರ್ಖಾನೆಯ ಪಕ್ಕದಲ್ಲಿಯೇ ಇರುತ್ತದೆಯೆಂದು ತಿಳಿಸಿದರು.

- ಒಟ್ಟು 14 ಎಕರೆ ಜಮೀನಿನಲ್ಲಿ 09 ಎಕರೆ ಜಮೀನನ್ನು ತಾವು ಸಕ್ಕರೆ ಕಾರ್ಖಾನೆಗೆ ನೀಡಿರುವುದಾಗಿ ತಿಳಿಸಿದರು.

- ಭೂಮಿ ಕೊಟ್ಟ ರೈತರಿಗೆ ಉದ್ಯೋಗ ನೀಡುವುದಾಗಿ ಕರಾರು ಪತ್ರವನ್ನು ಮಾಡಿರುತ್ತಾರೆ, ಆದರೆ ಸದರಿ ಪತ್ರದನ್ವಯು ಈವರೆಗೆ ಕಾರ್ಖಾನೆಯವರು ಭೂಮಿ ಕಳೆದುಕೊಂಡವರಿಗೆ ಉದ್ಯೋಗವಕಾಶವನ್ನು ನೀಡಿರುವುದಿಲ್ಲವೆಂದು ತಿಳಿಸಿದರು

- ಸದರಿಯವರ ಜಮೀನು ಕಾರ್ಖಾನೆಯ ಪಕ್ಕದಲ್ಲಿಯೇ ಇರುವುದರಿಂದ, ಡಿಸ್ಟಿಲ್ಲರಿ ಘಟಕದ ಸ್ಥಾಪನೆಯಿಂದ ಮುಂಬರುವ ದಿನಗಳಲ್ಲಿ ಸದರಿಯವರಿಗೆ ಬಹಳಷ್ಟು ಮಾಲಿನ್ಯದ ಸಮಸ್ಯೆಗಳು ಉಂಟಾಗಬಹುದೆಂದು ಆತಂಕ ವ್ಯಕ್ತಪಡಿಸಿದರು. ಆದ್ದರಿಂದ ಸದರಿ ಡಿಸ್ಟಿಲ್ಲರಿ ಘಟಕದ ಸ್ಥಾಪನೆಗೆ ಅವರ ಆಕ್ಷೇಪಣೆಯಿದೆಯೆಂದು ತಿಳಿಸಿದರು.

- ಕಾರ್ಖಾನೆಯವರು ಸುತ್ತಮುತ್ತಲಿನ ಜನರ ಅನಿಸಿಕೆಗಳನ್ನು ಆಲಿಸದೇ, ತಮಗೆ ಅನುಕೂಲವಾಗುವಂತಹ ರೀತಿಯಲ್ಲಿ ಕಾರ್ಖಾನೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆಂದು ಆರೋಪಿಸಿದರು.

- ಸದರಿ ಸಾರ್ವಜನಿಕ ಪರಿಸರ ಆಲಿಕೆಯ ಸಭೆಯ ಕುರಿತು ತನಗೆ ಈ ವಿಷಯ ಗೊತ್ತಿರಲಿಲ್ಲ, ಯಾವುದೇ ಸಿಬ್ಬಂದಿಯವರು ಸಹ ತನಗೆ ಈ ವಿಷಯವನ್ನು ತಿಳಿಸಿರುವುದಿಲ್ಲ, ಬೇರೆ ಜನರಿಂದ ಈ ಸಭೆಯ ಕುರಿತು ತಿಳಿದುಕೊಂಡು ಈ ಆಲಿಕೆಯ ಸಭೆಗೆ ಬಂದಿರುವುದಾಗಿ ತಿಳಿಸಿದರು.

- ಸದರಿ ಡಿಸ್ಟಿಲ್ಲರಿ ಘಟಕದ ಸ್ಥಾಪನೆಯಿಂದ ಸುತ್ತಮುತ್ತಲಿನ ಹಳ್ಳಿಯವರಿಗೆ ತುಂಬಾ ಅನಾನುಕೂಲಗಳಿದ್ದು, ಸ ಯೋಜನೆಗೆ ತಮ್ಮ ಆಕ್ಷೇಪಣೆಯನ್ನು ಸೂಚಿಸಿದರು ಮತ್ತು ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸುವುದಾಗಿ ತಿಳಿಸಿದರು.

- ಕಾರ್ಖಾನೆ ಸ್ಥಾಪಿತವಾಗಿ 10 ವರ್ಷವಾದರೂ ಇನ್ನೂವರೆಗೆ ರಸ್ತೆಯ ಡಾಂಬರೀಕರಣ ಮಾಡಿರುವುದಿಲ್ಲ, ಬಂಡಿ ಗ್ಯಾಂಗ್ ಹಾಗೂ ಕಾರ್ಖಾನೆಗೆ ಹಾಯ್ದು ಹೋಗುವ ವಾಹನಗಳಿಂದ ಉಂಟಾಗುವ ಧೂಳು ನೇರವಾಗಿ ತಮ್ಮ ಬೆಳೆಗಳ ಮೇಲೆ ಬೀಳುತ್ತಿದೆ, ಅದರಿಂದ ತುಂಬಾ ಬೆಳೆ ಹಾನಿಯಾಗುತ್ತಿದ್ದು ಅದರ ಪರಿಹಾರ ಧನವನ್ನು ಇನ್ನೂ ಕೂಡ ಕೊಟ್ಟಿರುವುದಿಲ್ಲವೆಂದು ತಿಳಿಸಿದರು.

- ಚಕ್ಕಡಿ ಗಾಡಿಯ ಗ್ಯಾಂಗದವರು ತನ್ನ ಹೊಲದಲ್ಲಿಯೇ ಮಲ-ಮೂತ್ರ ವಿಸರ್ಜನೆ ಮಾಡುವುದರಿಂದ ತನ್ನ ಜಮೀನಿನ ಕಬ್ಬಿನ ಕಟಾವು ಮಾಡಲು ಸಹ ಯಾರೂ ಮುಂದೆ ಬರುವುದಿಲ್ಲವೆಂದು ತಿಳಿಸಿದರು.
- ಸದರಿಯವರ 05 ಎಕರೆ ಹೊಲದಲ್ಲಿ ಡ್ರಿಪ್ ಮಾಡಿದ ಯೋಜನೆಯನ್ನು ಕಾರ್ಖಾನೆಯರು ಹಾಳು ಮಾಡಿದ್ದಾರೆಂದು ತಿಳಿಸಿದರು. ಈ ವಿಷಯದ ಕುರಿತು ಮಾತನಾಡಲು ಹೋದರೆ ಅವರ ಮೇಲೆಯೇ ಕಾರ್ಖಾನೆಯವರು ದೌರ್ಜನ್ಯ ನಡೆಸಿರುವುದಾಗಿ ತಿಳಿಸಿದರು.

❖ ಮಳೆಗಾಲದ ನಂತರ ಸಂಬಂಧಿಸಿದ ಅಧಿಕಾರಿಗಳು ಬೆಳೆಗಳ ಮೇಲೆ ಬಿದ್ದಿರುವ ಧೂಳಿನ ಕಣ ಮತ್ತು ಹಾನಿಯ ಬಗ್ಗೆ ಪರಿವೀಕ್ಷಿಸಬಹುದು, ಆಗ ಯಾವ ಪ್ರಮಾಣದಲ್ಲಿ ಬೆಳೆಗಳ ಮೇಲೆ ಧೂಳು ಬೀಳುತ್ತಿರುವ ಬಗ್ಗೆ ತಮಗೆ ತಿಳಿಯುತ್ತದೆಯೆಂದು ತಿಳಿಸಿದರು.

**ಸ್ಥಳೀಯ ಸಾರ್ವಜನಿಕರು ತಮ್ಮ ಅಹವಾಲನ್ನು ಲಿಖಿತ ರೂಪದಲ್ಲಿ ಪ್ರಾದೇಶಿಕ ಕಛೇರಿ, ಬಾಗಲಕೋಟನಲ್ಲಿ ಸಲ್ಲಿಸಿದರು. ಈ ಸಲ್ಲಿಕೆಯ ಪ್ರತಿಗಳನ್ನು ಅನುಬಂಧ-5ರ ಮೂಲಕ ಲಗತ್ತಿಸಲಾಗಿದೆ.**

**ಶ್ರೀ. ಕೆ. ಜಿ. ಶಾಂತಾರಾಮ, ಭಾರತ ಆಡಳಿತ ಸೇವೆ, ಜಿಲ್ಲಾಧಿಕಾರಿಗಳು, ಬಾಗಲಕೋಟ ಹಾಗೂ ಅಧ್ಯಕ್ಷರು, ಸಭೆಯಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗಳು ಮತ್ತು ಈ ಪ್ರಶ್ನೆಗಳಿಗೆ ಪರಿಸರ ತಜ್ಞರು ನೀಡಿದ ಉತ್ತರಗಳು ಮತ್ತು ಘಟಕದ ಸ್ಥಾಪನೆಯ ಅವಶ್ಯಕತೆ ಮತ್ತು ಘಟಕದ ಸ್ಥಾಪನೆಯಿಂದ ಆಗಬಹುದಾದ ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಹಾಗೂ ಘಟಕದ ಮಾಲೀಕರು ನೀಡಿದ ಭರವಸೆಗಳನ್ನುಅವಲೋಕಿಸಿ ಈ ಕೆಳಗಿನಂತೆ ಸಲಹೆ ಸೂಚನೆಗಳನ್ನು ನೀಡಿದರು.**

❖ ಇದೊಂದು ಪಾರದರ್ಶಕ ಮತ್ತು ಮುಕ್ತವಾದ ಚರ್ಚೆಗೆ ಹಮ್ಮಿಕೊಂಡಂತಹ ಸಭೆ.

❖ ಸದರಿ ಸಭೆಯಲ್ಲಿ ಅನೇಕ ಮೌಲಿಕ ಅಂಶಗಳನ್ನು ಎತ್ತಿ ಹಿಡಿದಿರುವುದಾಗಿ ತಿಳಿಸಿದರು. ಇದು ಎಲ್ಲರಿಗೂ ಒಂದು ಕಲಿಕೆಯ ಪಾಠವಾಗಬೇಕು.

❖ ಕಾರ್ಖಾನೆಯ ಆವರಣದಲ್ಲಿ ಪ್ರತಿ ವರ್ಷ 10000 ಸಸಿಗಳನ್ನು 5 ವರ್ಷಗಳವರೆಗೆ ನೆಡಬೇಕೆಂದು ಹಸಿರು ಪಟ್ಟಿಯನ್ನು ನಿರ್ಮಿಸಬೇಕು ಅದಕ್ಕಾಗಿ ಸ್ಥಳೀಯ ಗ್ರಾಮ ಪಂಚಾಯತ ಹಾಗೂ ಅರಣ್ಯ ಇಲಾಖೆಯ ಸಹಕಾರವನ್ನು ಪಡೆಯಬಹುದು.

❖ ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ತುರ್ತು ಕ್ರಮ ಕೈಗೊಳ್ಳುವುದು.

❖ ವಾಯ್ಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಧೂಳು ನಿಯಂತ್ರಣಕ್ಕಾಗಿ ಸೂಕ್ತ ಉಪಕರಣಗಳನ್ನು ಅಳವಡಿಸಿ ಸುತ್ತ ಮುತ್ತಲಿನ ಗ್ರಾಮಸ್ಥರ ಹಾಗೂ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಚ್ಚರಿಕೆ ವಹಿಸುವುದು.

❖ ಮಳೆ ನೀರು ಬಳಕೆಗಾಗಿ ಮಳೆ ನೀರು ಕೋಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು.

❖ ಕಾರ್ಖಾನೆಯಲ್ಲಿ ವಿನಾಯಿತಿ ಮೇರೆಗೆ ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

❖ ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳವುದು. ಸುತ್ತಮುತ್ತಲಿನ ಗ್ರಾಮಗಳ ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಸೇವೆಗಳಿಗೆ ಆದ್ಯತೆ ನೀಡಬೇಕು.

❖ ಕಾರ್ಖಾನೆಯಿಂದ ಹೊರಬರುವ ನೀರನ್ನು ಸಂಪೂರ್ಣವಾಗಿ ಸಂಸ್ಕರಿಸಿ ಪುನರ್ಬಳಕೆ ಮಾಡುವುದು. ಯಾವುದೇ ಕಾರಣಕ್ಕೂ ಕಲುಷಿತ ನೀರು ಭೂಮಿಯಲ್ಲಿ ಇಂಗಿ ಆ ಪ್ರದೇಶದಲ್ಲಿರುವ ಕೊಳವೆ ಬಾವಿ ಹಾಗೂ ತೆರೆದ ಬಾವಿಗಳ ನೀರಿನ ಮೇಲೆ ಪ್ರತಿಕೂಲ ಪರಿಣಾಮ ಆಗದಂತೆ ನೋಡಿಕೊಳ್ಳುವುದು.

❖ ಸದರಿ ಯೋಜನೆಯ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸಾರ್ವಜನಿಕರಿಗೆ ತಿಳಿಹೇಳಬೇಕಾಗಿತ್ತು, ಆದರೆ ಅವರು ಹಾಗೇ ಮಾಡಿರುವುದಿಲ್ಲವೆಂದು ತಿಳಿಸಿದರು. ಆದ್ದರಿಂದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸದರಿ ವಿಷಯದ ಕುರಿತು ಮಾತನಾಡುವಂತೆ ಸೂಚಿಸಿದರು.

❖ ಸದರಿ ಯೋಜನೆಯಿಂದ ಮಾಲಿನ್ಯವಾಗುವುದು ಸಹಜ, ಇಲ್ಲದೇ ಹೋಗಿದ್ದರೆ ನಾವು ಇಲ್ಲಿ ಸಭೆ ನಡೆಸುವ ಅವಶ್ಯಕತೆ ಇರುತ್ತಿರಲಿಲ್ಲವೆಂದು ತಿಳಿಸಿದರು.

❖ ಸದರಿ ಯೋಜನೆಯಿಂದ ಕಾರ್ಖಾನೆಯವರಿಗೂ ಮತ್ತು ಜನರಿಗೂ ಸಹ ತುಂಬಾ ಅನುಕೂಲಗಳಿವೆಯೆಂದು ಜನರ ಒಟ್ಟಾರೆ ಅಭಿಪ್ರಾಯವಿದೆಯೆಂದು ತಿಳಿಸಿದರು.

❖ ಡಿಸ್ಟಿಲ್ಲರಿ ಘಟಕದ ಸ್ಥಾಪನೆಯಿಂದ ಯಾವ ರೀತಿಯ ಮಾಲಿನ್ಯ ಉಂಟಾಗುತ್ತದೆ ಹಾಗೂ ಅದನ್ನು ತಡೆಗಟ್ಟಲು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಮಾಹಿತಿಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಈ ವೇದಿಕೆಯ ಮೂಲಕ ಜನರಿಗೆ ತಿಳಿಸುವಂತೆ ಆದೇಶಿಸಿದರು.

❖ ಮಾಲಿನ್ಯ ನಿಯಂತ್ರಣ ಮಂಡಳಿಯವರು ಘಟಕವನ್ನು ಮೇಲಿಂದ ಮೇಲೆ ಪರಿಶೀಲಿಸಿ ಕಾರ್ಖಾನೆಯವ ತೆಗೆದುಕೊಂಡ ಕ್ರಮಗಳ ಬಗ್ಗೆ ನಿಗಾವಹಿಸಬೇಕೆಂದು ಮತ್ತು ಪರಿಶೀಲನಾ ವರದಿಗಳು ಕೇವಲ ಕಡತಕ್ಕೆ ಸೇರಿಸಬಾರದು ಅವುಗಳನ್ನು ಸಾರ್ವಜನಿಕರ ಮಾಹಿತಿಗಾಗಿ ನೀಡುವಂತೆ ಸೂಚಿಸಿದರು.

**ಶ್ರೀ ಎಮ್ ಏ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬಾಗಲಕೋಟ**

❖ ಸದರಿಯವರು ಕಾಕಾಂಬಿ ಆಧಾರಿತ ಮದ್ಯಸಾರ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

❖ ಸದರಿ ಘಟಕದಿಂದ ಮುಖ್ಯವಾಗಿ 03 ತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತವೆ, ಸ್ಪೆಂಟ್ ವಾಶ, ಸ್ಪೆಂಟ್ ಲೀ ಮತ್ತು ಯೀಸ್ಟ ಸ್ಲಡ್ಜ.

❖ ಸ್ಪೆಂಟ ವಾಶನ್ನು ನೇರವಾಗಿ ಬಾಯ್ಲರನಲ್ಲಿ ಸುಡುವ ತಂತ್ರಜ್ಞಾನವನ್ನು ಕಾರ್ಖಾನೆಯವರು ಅಳವಡಿಸುತ್ತಿದ್ದಾರೆ. ಈ ರ ಮಾಡುವುದರಿಂದ ಸ್ಪೆಂಟವಾಶನ್ನು ಬೂದಿಯಾಗಿ ಪರಿವರ್ತನೆ ಮಾಡಲಾಗುತ್ತದೆ. ಸದರಿ ಬೂದಿಯನ್ನು ಪೊಟ್ಯಾಶ ಆಗಿ ಬಳಸಲಾಗುವುದು.

❖ ಕಂಡೆನ್ಸೆಟ್ ನೀರು ಮತ್ತು ಸ್ಪೆಂಟ್ ಲೀಗಳನ್ನು ಪುನರ್ಬಳಕೆ ಮಾಡಲಾಗುವುದು.

❖ 110 ಟಿ.ಪಿ.ಎಚ್. ಇನ್ಸಿರೆಶನ್ ಬಾಯ್ಲರಗೆ 80 ಮೀ ಚಿಮಣಿ ಅಳವಡಿಸಲಾಗುತ್ತದೆ ಮತ್ತು ಅದಕ್ಕೆ ಬ್ಯಾಗ ಫಿಲ್ಟರ ತಂತ್ರಜ್ಞಾನವನ್ನು ಅಳವಡಿಸಲಾಗುತ್ತದೆ. ಬ್ಯಾಗ ಫೀಲ್ಟರ ವಾತಾವರಣದಲ್ಲಿ ಹೊರಸೂಸುವ ಬೂದಿಯನ್ನು ನಿಯಂತ್ರಿಸುತ್ತದೆ, ಅದೇ ಬೂದಿಯನ್ನು ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತದೆ.

❖ ಮದ್ಯಸಾರ ಘಟಕದಿಂದ ವಾಸನೆ ಬರುವುದು ಖಚಿತ, ಆದರೆ ಸದರಿ ಕಾರ್ಖಾನೆಯವರು ಕಂಟಿನ್ಯೂಸ್ ಪ್ರಾಸೆಸ್‌ನ್ನು ಅಳವಡಿಸಿಕೊಂಡಿರುವುದರಿಂದ ವಾಸನೆಯ ಪ್ರಮಾಣ ಕಡಿಮೆಯಾಗುತ್ತದೆಯೆಂದು ತಿಳಿಸಿದರು.

❖ ಸಹ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಬಗ್ಯಾಸ್‌ದ ಪ್ರಮಾಣವು ಕಡಿಮೆಯಾಗುತ್ತದೆ. ಆದ್ದರಿಂದ ಯಾವುದೇ ರೀತಿಯ ಧೂಳಿನ ಕಣಗಳು ಸುತ್ತಮುತ್ತಲಿನ ಜಮೀನುಗಳಿಗೆ ಹರಡುವುದಿಲ್ಲವೆಂದು ತಿಳಿಸಿದರು.

- ಈ ಆಲಿಕೆ ಸಭೆಯ ನಡವಳಿಕೆಗಳನ್ನು ಪ್ರಾದೇಶಿಕ ಕಛೇರಿ, ಬಾಗಲಕೋಟದಲ್ಲಿ ಹಾಗೂ ನಾಗರಾಳ ಮತ್ತು ಸೈನೇಗಲ್ಲಿ ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಪ್ರದರ್ಶಿಸಲಾಗುವುದು.

- ಕಾರ್ಖಾನೆಯವರು ಸದರಿ ಆಲಿಕೆ ಸಭೆಯಲ್ಲಿ ನೀಡಿರುವ ಆಶ್ವಾಸನೆಗಳನ್ನು ಸರಿಯಾಗಿ **ಪೂರೈಸುವ** ಬಗ್ಗೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಪರೀಶಿಲಿಸಿ ಖಚಿತಪಡಿಸುವುದಾಗಿ **ತಿಳಿಸಿದರು**.

**ಕಾರ್ಖಾನೆಯ ಪ್ರತಿಪಾದಕರು ಸದರಿ ಪರಿಸರ ಸಾರ್ವಜನಿಕ ಸಭೆಯಲ್ಲಿ ಮಂಡಿಸಿದ ಸ್ಪಷ್ಟಿಕರಣದ ಉತ್ತರಗಳು:**

- ಹಳೀಯಾಳದ ಡಿಸ್ಟಿಲ್ಲರಿ ಘಟಕದಲ್ಲಿ ಸ್ಪೆಂಟ ವಾಶನ್ನು 100% ಇನ್ಸಿನರೇಶನ್ ಮಾಡುವುದರಿಂದ **ಯಾವುದೇ ರೀತಿಯ** ವಿಷಕಾರಿ ಘನ ತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುವುದಿಲ್ಲವೆಂದು ತಿಳಿಸಿದರು.

- ಹಳೀಯಾಳದ ಕಾರ್ಖಾನೆಯಲ್ಲಿ ಅಳವಡಿಸಲಾಗಿರುವ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ಹಾಗೂ ಮದ್ಯಸಾರ ಘಟಕದಿಂದ ವಾಸನೆ ಪ್ರಮಾಣದ ಬಗ್ಗೆ ಸುತ್ತಮುತ್ತಲಿನ 10–15 ರೈತರನ್ನು ಹಳಿಯಾಳ ಘಟಕಕ್ಕೆ ಕರೆದೊಯ್ದು ಅವರಲ್ಲಿರುವ ಆತಂಕಗಳನ್ನು ನಿವಾರಣೆ ಮಾಡಲಾಗುವುದು.

- ಹಳಿಯಾಳ ಘಟಕದ ಸುತ್ತಮುತ್ತಲಿನ ಜಮೀನಿನ ಮಾಹಿತಿಯನ್ನು ನೀಡಲು ಸಿದ್ಧ. ಅಲ್ಲಿ ಆರ್ಗಾನಿಕ್ ಕಾರ್ಬನ್ ಕೇವಲ 0.9% ಇರುತ್ತದೆಯೆಂದು ತಿಳಿಸಿದರು.

- ಅಕ್ಕ ಪಕ್ಕದ ಜನರಿಗೆ ಕಾರ್ಖಾನೆಯಿಂದ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ತಮ್ಮದಾಗಿರುತ್ತದೆಯೆಂದು ತಿಳಿಸಿದರು.

- ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಬಗ್ಯಾಸ್‌ವು ಕಡಿಮೆಯಾಗುತ್ತದೆ. ಅದರಿಂದ ಯಾವುದೇ ರೀತಿಯ ಧೂಳಿನ ಕಣಗಳು ಸುತ್ತಮುತ್ತಲಿನ ಜಮೀನುಗಳಿಗೆ ಹರಡುವುದಿಲ್ಲವೆಂದು ತಿಳಿಸಿದರು.

- 60 ಕೆಲ್‌ಪಿಡಿ ಮದ್ಯಸಾರ ಘಟಕದ ಸ್ಥಾಪನೆಗೆ 110 ಕೋಟಿ ರೂ ಹಣವನ್ನು ನಿಗದಿಪಡಿಸಿದ್ದು, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

- 35 ಜನ ಜಮೀನನ್ನು ಮಾರಾಟ ಮಾಡಿದ ರೈತರ ಮಕ್ಕಳು ಸದರಿ ಕಾರ್ಖಾನೆಯಲ್ಲಿ ಖಾಯಂ ಆಗಿ ಉದ್ಯೋಗ ನಿರ್ವಹಿಸುತ್ತಿದ್ದಾರೆ. ಇನ್ನೂ ಯಾರಾದರೂ ಉದ್ಯೋಗ ಸಿಗದೇ ಇದ್ದರೆ ಅವರು ನೇರವಾಗಿ ತಮ್ಮನ್ನು ಬಂದು ಸಂಪರ್ಕಿಸಬಹುದು, ಅವರಿಗೆ ಅವರ ಕೌಶಲ್ಯಕ್ಕೆ ಅನುಗುಣವಾಗಿ ಉದ್ಯೋಗ ನೀಡಲಾಗುವುದು ಎಂದು ತಿಳಿಸಿದರು.

- ಸಾರ್ವಜನಿಕರು ಒತ್ತುಪಡಿಸಿದ ರಸ್ತೆಯ ಡಾಂಬರೀಕರಣದ ಕೆಲಸವನ್ನು ಆದಷ್ಟು ಶೀಘ್ರದಲ್ಲಿ ಕೈಗೊತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

- ಸ್ಪೆಂಟ ಲೀಯನ್ನು 100% ಸಂಸ್ಕರಿಸಿ ಪುನರ್ಬಳಕೆ ಮಾಡಲಾಗುವುದು, ಯಾವುದೇ ರೀತಿಯಲ್ಲಿ ಅದನ್ನು ಪರಿಸರಕ್ಕೆ ಬಿಡುವುದಿಲ್ಲವೆಂದು ತಿಳಿಸಿದರು.

❖ ನಾವು 10 ವರ್ಷಗಳಿಂದ ಕಾರ್ಖಾನೆ ನಡೆಸುತ್ತಿದ್ದೇವೆ. ಇಲ್ಲಿಯವರೆಗೆ ಸುಮಾರು 1500 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ 91%ರಷ್ಟು ಹಣ ಕೇವಲ ಕಬ್ಬಿನ ಬಿಲ್‌ನ್ನು ಪೂರೈಸುವಲ್ಲಿ ಖರ್ಚಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದವರು ರೈತರ ಹಿತಕ್ಕಾಗಿ ಡಿಸ್ಟಿಲ್ಲರಿ ಘಟಕವನ್ನು ಸ್ಥಾಪಿಸುವಂತೆ ಸೂಚಿಸಿರುತ್ತಾರೆಂದು ತಿಳಿಸಿದರು.

❖ ಸದರಿ ಯೋಜನೆಯಿಂದ ಯಾರಿಗೂ, ಯಾವುದೇ ರೀತಿಯ ತೊಂದರೆಗಳಾಗುವುದಿಲ್ಲ, ಒಂದು ವೇಳೆ ಆಗಿದ್ದಲ್ಲಿ, ಅದಕ್ಕೆ ನೇರವಾಗಿ ತಾವು ಹೊಣೆಗಾರರಾಗುತ್ತೇವೆಂದು ತಿಳಿಸಿದರು ಮತ್ತು ಸದರಿ ಯೋಜನೆಯನ್ನು ಎಲ್ಲರೂ ಸಮರ್ಥಿಸಬೇಕೆಂದು ವಿನಂತಿಸಿಕೊಂಡರು.

❖ ಕಬ್ಬು ತೆಗೆದುಕೊಂಡು ಬರುವ ಚಕ್ಕಡಿ ಬಂಡಿಯವರಿಗೆ ಕಾರ್ಖಾನೆಯ ಆವರಣದಲ್ಲಿಯೇ ಶೌಚಾಲಯದ ವ್ಯವಸ್ಥೆಯನ್ನು ಅಕ್ಟೋಬರದ 15ರ ಒಳಗೆ ನಿರ್ಮಿಸುವುದಾಗಿ ಮತ್ತು ಸಿಸಿಟಿವಿಯನ್ನು ಅಳವಡಿಸುವುದಾಗಿ ತಿಳಿಸಿದರು.

❖ ಸದರಿ ಕಾರ್ಖಾನೆಯು ಪ್ರಾರಂಭವಾದಾಗ 1,540 ಕ್ಯೂ.ಲೀ/ ದಿನ ಕೃಷ್ಣಾ ನದಿಯಿಂದ ನೀರನ್ನು ಎತ್ತುವ ಅನುಮತಿ ಇರುತ್ತದೆ. ಆದರೆ, ತಾವು ಸಂಸ್ಕರಿಸಿ ನೀರನ್ನು ಉಪಯೋಗಿಸುವುದರಿಂದ ಪ್ರತಿದಿನ ಕೇವಲ 460ಕ್ಯೂ.ಲೀ/ ದಿನ ನೀರನ್ನು ಮಾತ್ರ ಬಳಸುತ್ತಿರುವುದಾಗಿ ತಿಳಿಸಿದರು. ಪ್ರಸ್ತುತ ವಿಸ್ತರಣೆ ಯೋಜನೆಗೆ ತಾವು ಹೆಚ್ಚಿನ ನೀರನ್ನು ಬಳಸದೇ, ತಮಗೆ ಅನುಮತಿಯಿರುವ 1,540 ಕ್ಯೂ.ಲೀ/ ದಿನ ಪರಿಮಿತಿಯ ಒಳಗೆಯೇ ನೀರನ್ನು ಬಳಸುವುದಾಗಿ ತಿಳಿಸಿದರು.

❖ ಡಿಸ್ಟಿಲ್ಲರಿ ಘಟಕದಿಂದ ಝೀರೊ ಡಿಸಚಾರ್ಜ್ ಇರುವುದರಿಂದ ಯಾವುದೇ ನೀರನ್ನು ರೈತರಿಗೆ ಕೊಡಲಾಗುವುದಿಲ್ಲವೆಂದು ತಿಳಿಸಿದರು.

ಸಭೆಯಲ್ಲಿ ಕೇಳಲಾದ ಪ್ರಶ್ನೆಗಳು, ಆಕ್ಷೇಪಣೆಗಳು ಹಾಗೂ ಅವುಗಳಿಗೆ ನೀಡಿದ ಉತ್ತರ ಇವೆಲ್ಲವುಗಳನ್ನು ವಿಡಿಯೋ ರೇಕಾರ್ಡಿಂಗ ಮಾಡಲಾಗಿದ್ದು. ಅದನ್ನು ಭಾರತ ಸರ್ಕಾರದ ಪರಿಸರ ಹಾಗೂ ಅರಣ್ಯ ಸಚಿವಲಾಯಕ್ಕೆ ಕಳಿಸಲಾಗುವುದೆಂದು ತಿಳಿಸಿದರು. ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಗ್ರಾಮಸ್ಥರ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಲ್ಲಾ ಅವಶ್ಯಕ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರು ಸಭೆಯ ಆಯೋಜಕರಿಗೆ ಕಟ್ಟು ನಿಟ್ಟಿನ ನಿರ್ದೇಶನ ನೀಡಿದರು. ನಂತರ ಸಾರ್ವಜನಿಕರ ಅಭಿಪ್ರಾಯವನ್ನು ಆಲಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಾರ್ವಜನಿಕರು ನಿಯೋಜಿತ ಘಟಕದ ಸ್ಥಾಪನೆಯ ಪರವಾಗಿ ತಮ್ಮ ಅಭಿಪ್ರಾಯವನ್ನು ದಾಖಲಿಸಿಲಾಯಿತು.

ಅಂತಿಮವಾಗಿ ಶ್ರೀ ಎಮ್ ಏ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬಾಗಲಕೋಟ, ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗ ಬಾಗಲಕೋಟ, ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ., ವಲಯ ಕಛೇರಿ, ಧಾರವಾಡ, ಉಪವಿಭಾಗಾಧಿಕಾರಿಗಳು, ಬಾಗಲಕೋಟ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಘಟಕದ ಸಂಚಾಲಕರಿಗೆ, ಸಿಬ್ಬಂಧಿಗಳಿಗೆ, ಸಾರ್ವಜನಿಕ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂಧಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

Shanth

**ಶ್ರೀ. ಕೆ.ಜಿ. ಶಾಂತಾರಾಮ, ಭಾ. ಆ. ಸೇ,**
**ಜಿಲ್ಲಾಧಿಕಾರಿಗಳು ಬಾಗಲಕೋಟ**
**ಮತ್ತು**
**ಅಧ್ಯಕ್ಷರು ಸಾರ್ವಜನಿಕ ವಿಚಾರಣಾ**
**ಸಮೀತಿ ಬಾಗಲಕೋಟ, ಕರ್ನಾಟಕ.**